ಇದನ್ನು ಮಾಡುವುದರ ಬಗ್ಗೆ ಏಳೂವರೆ ಕೋಟಿ ರೂಪಾಯಿಗಳಿಗೆ ಟೆಂಡರ್‌ನ್ನು ಕರೆದು ಲೋಯಸ್ಟ್ ಬಿಡ್ಡರ್ ಯಾರು ಇದ್ದರೋ ಅವರಿಗೆ ಕೊಡಬೇಕೆಂಬ ಹಂತದಲ್ಲಿದ್ದೇವೆ ಎನ್ನುತಕ್ಕಂತಹ ವಿಚಾರವನ್ನು ನಾವು ಹೇಳಿದ್ದೇವೆ. ಇದರ ಬಗ್ಗೆ ಮತ್ತಷ್ಟು ಮಾಹಿತಿಗಳು ಬೇಕೆಂದರೆ, ಏನಾದರೂ ವಿಚಿತವಾಗಿ ಕೇಳಿದರೆ ನಾನು ಕೊಡುವುದಕ್ಕೆ ಸಿದ್ದನಿದ್ದೇನೆ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮತ್ಸ್ಯ ಆಶ್ರಯ ಯೋಜನೆಯ ಅನುಷ್ಠಾನ.

638 (6634) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 200405 ಮತ್ತು 200506ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿದ ಮತ್ಸ್ಯ ಆಶ್ರಯ ಯೋಜನೆಯ ವಿವರಗಳೇನು;

ಆ. ಹುಡ್ಕೋ ನೆರವಿನ ಈ ಯೋಜನೆಯಡಿಯಲ್ಲಿ ಎಷ್ಟು ಜನ ಮೀನುಗಾರರಿಗೆ ಮನೆಗಳನ್ನು ಒದಗಿಸಿ ಕೊಡಲಾಗಿದೆ;

ಇ. ಸದರಿ ಯೋಜನೆಗಾಗಿ ಮಂಜೂರು ಮಾಡಿದ ಮೊತ್ತ ಎಷ್ಟು; ಮನೆಗಳ ಹಂಚಿಕೆಯ ತಾಲ್ಲೂಕುವಾರು ವಿವರ ನೀಡುವುದು ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಯವರು.)

ಅ. 200405 ಮತ್ತು 200506ನೇ ಸಾಲಿನಲ್ಲಿ ಸರ್ಕಾರದಿಂದ ಮತ್ಸ್ಯ ಆಶ್ರಯ ಯೋಜನೆಯಡಿ ಹೊಸದಾಗಿ ಮನೆಗಳು ಮಂಜೂರಾಗಿರುವುದಿಲ್ಲ. ಮತ್ಸ್ಯ ಆಶ್ರಯ 2ನೇ ಹಂತದ ಯೋಜನೆಯಡಿ 2001–02. 2002–03 ಮತ್ತು 2003–04ನೇ ಸಾಲುಗಳಿಗೆ ಉಡುಪಿ ಜಿಲ್ಲೆಗೆ ಮಂಜೂರಾದ ಒಟ್ಟು 523 ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರಾದ ಒಟ್ಟು 145 ಮನೆಗಳಿಗೆ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ. ಇದುವರೆಗೆ ಉಡುಪಿ ಜಿಲ್ಲೆಯಲ್ಲಿ 321 ಜಿಲ್ಲೆಯಲ್ಲಿ 321 ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 106 ಮನೆಗಳನ್ನು ಪೂರ್ಣಗೊಳಿಸಿದ್ದು ಉಳಿದ ಮನೆಗಳು ಪ್ರಗತಿಯಲ್ಲಿವೆ.

ಆ. ಹುಡ್ಕೋ ನೆರವಿನ ಮತ್ಸ್ಯ ಆಶ್ರಯ ಯೋಜನೆಯಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರಾದ ಮನೆಗಳ ವಿವರ ಕೆಳಕಂಡಂತಿವೆ.

ಜಿಲ್ಲೆ	ಮತ್ಸ್ಯಶ್ರಯ ಯೋಜನೆ		
	1ನೇ ಹಂತ	2ನೇ ಹಂತ	ಒಟ್ಟು
ಉಡುಪಿ	1010	523	1533
ದಕ್ಷಿಣ ಕನ್ನಡ	125	145	270
ಒಟ್ಟು	1135	668	1803

ಇ. ಸದರಿ ಯೋಜನೆಯಡಿ ಮಂಜೂರು ಮಾಡಿದ 1803 ಮನೆಗಳ ಬಾಬ್ತು ರೂ. 540.90 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಮನೆ ಹಂಚಿಕೆಯ ತಾಲ್ಲೂಕುವಾರು ವಿವರ ಕೆಳಕಂಡಂತಿವೆ.

ಜಿಲ್ಲೆ/ತಾಲ್ಲೂಕು	ಮಂಜೂರಾದ ಮನೆಗಳ ಸಂಖ್ಯೆ
ಉಡುಪಿ ಜಿಲ್ಲೆ	
1) ಉಡುಪಿ ತಾಲ್ಲೂಕು	822
2) ಕುಂದಾಪುರ ತಾಲ್ಲೂಕು	671
3) ಕಾರ್ಕಳ ತಾಲ್ಲೂಕು	40
ದಕ್ಷಿಣ ಕನ್ನಡ ಜಿಲ್ಲೆ	
1) ಮಂಗಳೂರು ತಾಲ್ಲೂಕು	270

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಟ್ಟಿಗೆ ಎಷ್ಟು ಮಹಾತ್ಮಾ ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕಟ್ಟಿದ್ದೀರೆಂದು ಪ್ರಶ್ನೆ ಕೇಳಿದ್ದೇನೆ. ಉತ್ತರ ಕೊಟ್ಟಿದ್ದಾರೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕಡಿಮೆ ಮನೆಗಳನ್ನು ಕೊಟ್ಟಿರುವುದನ್ನು ಕಾಣುತ್ತಿದ್ದೇವೆ. ಇದು ಏತಕ್ಕಾಗಿ ತಾರತಮ್ಯವಾಗಿದೆ, ಎರಡನೆಯದಾಗಿ ಈ ಮನೆಗಳಿಗೆ ಎಷ್ಟು ಹಣವನ್ನು ಕೊಡುತ್ತಾರೆ ಎಷ್ಟು ಸಾಲ ಮತ್ತು ಎಷ್ಟು ಅನುದಾನ ಕೊಡುತ್ತಾರೆ ಅದರೊಟ್ಟಿಗೆ ಒಳನಾಡ ಮೀನುಗಾರರಿಗೂ ಕೂಡ ಈ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕೊಡುತ್ತೀರಿ? ಯಾವ ಯಾವ ತಾಲ್ಲೂಕಿನಲ್ಲಿ ಒಳನಾಡು ಮೀನುಗಾರಿಕೆ ಮಾಡುವಂತಹ ಮೀನುಗಾರರು ಇದ್ದಾರೆ. ಎಂಬುದನ್ನು ತಾವು ತಿಳಿಸಬೇಕಾಗಿ ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ ಮಾನ್ಯ ಕೈಗಾರಿಕಾ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ ಮೊದಲನೆಯದಾಗಿ ಮಾನ್ಯ ಸದಸ್ಯರಾದ ಬಂಗೇರಾರವರಾದ ಪ್ರಶ್ನೆ ಏನಿದೆ ಅದಕ್ಕೆ ಉಪ ಪ್ರಶ್ನೆ ದಕ್ಷಿಣ ಕನ್ನಡ ಜಿಲ್ಲೆಗೆ ಏತಕ್ಕಾಗಿ ಕಡಿಮೆ ಎಂದು ಹೇಳಿದ್ದಾರೆ ಇದು ನಿಜ ವಸ್ತು ಸ್ಥಿತಿಯಲ್ಲಿ ತಮಗೆ ಗೊತ್ತಿರುವ ಹಾಗೆ ಹುಡ್ಕೋ ಸಂಸ್ಥೆಯಿಂದ 2001–02ನೇ ಸಾಲಿನಲ್ಲಿ 5000 ಮನೆಗಳನ್ನು ತೆಗೆದುಕೊಂಡು ಆಗ ಮಾಡಿರುವಂತಹ ಮನೆಗಳು ಇವೆ. 5000 ಮನೆಗಳಲ್ಲಿ 2400 ಮನೆಗಳು ಕಂಪ್ಲೀಟ್ ಆಗಿವೆ. ಇನ್ನು 2600 ಮನೆಗಳು ಕಂಪ್ಲೀಟ್ ಆಗಬೇಕಾಗಿದೆ. ಇದು 2001–02ನೇ ಸಾಲಿನ ಪ್ರೋಗ್ರಾಮ್ ಆಗಿದೆ. 200405ನೇ ಸಾಲಿನಲ್ಲಿ 2005–06ನೇ ಸಾಲಿನಲ್ಲಿ ಈ ಒಂದು ಕಾರ್ಯಕ್ರಮದ ಅಡಿಯಲ್ಲಿ ಯಾವುದೇ ಹೊಸ ಮನೆಗಳನ್ನು ಸಹಿತ ನಾವು ಇದುವರೆವಿಗೂ ಪ್ರಾರಂಭ ಮಾಡಿರುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಈ ಇಲಾಖೆಯ ಒಂದು ವೀಕ್ಷಣೆಯನ್ನು ಮಾಡಿದಂತಹ ಸಂದರ್ಭದಲ್ಲಿ ಈ ಕಾರ್ಯಕ್ರಮ ಬಿಟ್ಟು ಹೋಗಬಾರದು, ಮೀನುಗಾರರಿಗೆ ಕಡಲತೀರದಲ್ಲಿ ಅಷ್ಟೇ ಅಲ್ಲ, ಒಳನಾಡುಗಳಲ್ಲೂ ಸಹಿತ ಸಹಾಯ ಮಾಡಬೇಕೆನ್ನುವಂತಹ ದೃಷ್ಟಿಯಿಂದಾಗಿ 2005–06ನೇ ಸಾಲಿನಲ್ಲಿ ಹುಡ್ಕೋ ಸಂಸ್ಥೆಯಿಮದ ಸಾಲವನ್ನು ತೆಗೆದುಕೊಂಡು ಮತ್ತೆ 5000 ಮನೆಗಳನ್ನು ಕೊಡಬೇಕೆಂದು ಉದ್ದೇಶವನ್ನು ಇಟ್ಟು ಕೊಂಡಿದ್ದೇವೆ. ಆ ಸಂದರ್ಭದಲ್ಲಿ ತಾವು ದಕ್ಷಿಣಕನ್ನಡ ಜಿಲ್ಲೆಗೆ ಆಗಿರುವಂತಹ ತಾರತಮ್ಯದ ಬಗ್ಗೆ ಹೇಳಿದ್ದೀರಿ, ಆ ರೀತಿ ಏನಾದರೂ ತಾರತಮ್ಯ ಆಗಿದ್ದರೆ ಎಲ್ಲದಕ್ಕೂ ಕೂಡ ಒಂದು ಕಾರಣಗಳು ಇರುತ್ತವೆ. ಉಡುಪಿ ಜಿಲ್ಲೆಯಲ್ಲಿ ಮೀನುಗಾರರ ಸಂಖ್ಯೆ ಸ್ವಲ್ಪ ಜಾಸ್ತಿ ಇರಬಹುದು. ಉಡುಪಿಯನ್ನು ಕಂಪೇರ್

ಮಾಡಿ ನೋಡಿದಾಗ ಮಂಗಳೂರು ಜಿಲ್ಲೆಗೆ ಕಡಿಮೆ ಇರಬಹುದು, ಒಳನಾಡಿನಲ್ಲೂ ಬಹಳ ಜನ ಮೀನುಗಾರರು ಇದ್ದಾರೆ. ಇವತ್ತು ದೊಡ್ಡ ದೊಡ್ಡ ಕೆರೆಗಳು ಇರುವ ಕಡೆಗಳಲ್ಲಿ ಅನೇಕ ಮೀನುಗಾರರು ಮೀನುಗಾರಿಕೆಯಲ್ಲಿ ಜೀವನವನ್ನು ಅವಲಂಬಿಸಿ ಕೊಂಡಿರುವಂತಹ ಜನರು ಇದ್ದಾರೆ. ಒಳನಾಡಿನಲ್ಲೂ ಸಹಿತ ಇದನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ತಮಗೆ ಗೊತ್ತಿರುವ ಹಾಗೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2001–02 ರಲ್ಲಿದ್ದಂತಹ ಸರ್ಕಾರ ತನ್ನ ವಿವೇಚನೆಗೆ ಅನುಗುಣವಾಗಿ 1800 ಮನೆಗಳನ್ನು ಎರಡು ಜಿಲ್ಲೆಗಳಿಗೆ ಕೊಟ್ಟದೆ. ಉಳಿದಿರತಕ್ಕಂತಹ ಜಿಲ್ಲೆಗಳು ಇಡೀ ರಾಜ್ಯಕ್ಕೆ ಕಡಲ ತೀರದ ಜಿಲ್ಲೆಗಳಿಗೆ ಆದ್ಯತೆಯನ್ನು ಕೊಡಬೇಕೆಂದು ಸರ್ಕಾರದ ಗಮನದಲ್ಲಿ ಇರಬೇಕು. ಈ ಸಾರಿ ಕೊಡುವಂತಹ ಸಂದರ್ಭದಲ್ಲಿ ತಮ್ಮ ವಿಚಾರವನ್ನು ಸಹಿತ ಗಮನದಲ್ಲಿಟ್ಟು ಕೊಂಡಿದ್ದೇವೆ. ತಾವು ಮತ್ತೊಂದು ಉಪಪ್ರಶ್ನೆಯನ್ನು ಕೇಳಿದ್ದೀರಿ. ಇದರಲ್ಲಿ ಸಬ್ಸಿಡಿ ಎಷ್ಟು, ಸಾಲ ಎಷ್ಟು ಎಂದು ಕೇಳಿದ್ದೀರಿ, ಅದರ ಬಗ್ಗೆ ನನ್ನ ಹತ್ತಿರ ಅಂಕಿಅಂಶಗಳು ಇಲ್ಲ. ನಾನು ನಿಮಗೆ ಬರೆದು ಕಳುಹಿಸಿಕೊಡುತ್ತೇನೆ.

ಶ್ರೀ ಎಸ್. ಯೋಗೀಶ್ ಭಟ್ : ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿಗೆ ಇದರಲ್ಲಿ ಸ್ಪಷ್ಟವಾದ ತಾರತಮ್ಯವನ್ನು ತಾವು ಗಮನಿಸಿರಬಹುದು ದಯವಿಟ್ಟು ಇದನ್ನು ಸರಿಪಡಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಏತಕ್ಕಾಗಿ ಈ ರೀತಿ ನಮಗೆ ಅನ್ಯಾಯವಾಗುವ ಹಾಗೆ ಮಾಡಿದ್ದಾರೆ ಎಂಬ ಬಗ್ಗೆ ನಾವು ಕೇಳುತ್ತಿದ್ದೇವೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಮತ್ಸ್ಯಾ ಆಶ್ರಯ ಸ್ಕೀಮ್‌ನಲ್ಲಿ ಮೀನುಗಾರರಿಗೆ ಮನೆ ಕೊಡುವಂತಹ ಯೋಜನೆಯಾಗಿದೆ. ಇದರಲ್ಲಿ 100 ಪರ್ಸೆಂಟ್ ಅವರು ಮರುಪಾವತಿ ಮಾಡುವಂತಹ ವ್ಯವಸ್ಥೆ ಇಲ್ಲ. ಮನೆಕಟ್ಟುವುದಕ್ಕೆ ಹಣ ಸ್ಯಾಂಕ್ಷನ್ ಮಾಡುತ್ತಾರೆ, ಮನೆ ಸ್ಯಾಂಕ್ಷನ್ ಮಾಡಿ ಅದನ್ನು 3 ಕಂತುಗಳಲ್ಲಿ ಹಣವನ್ನು ಕೊಡುತ್ತಾರೆ. 10 ಸಾವಿರ ರೂಪಾಯಿಗಳಂತೆ ಕೊಡುತ್ತಾರೆ. 6 ತಿಂಗಳಲ್ಲಿ ಮನೆ ಕಟ್ಟಿ ಮುಕ್ತಾಯವಾಗಬೇಕು ಇದು ಮನೆ ಕಟ್ಟುವ 5 ವರ್ಷದ ಯೋಜನೆಗಳಲ್ಲ. ಒಂದು ಹೊಸ ಮನೆಯನ್ನು ಕಟ್ಟಬೇಕಾದರೆ 6 ತಿಂಗಳಲ್ಲಿ ಮನೆಯನ್ನು ಕಟ್ಟಬೇಕು. ಈ ಸರ್ಕಾರಗಳು ಒಂದು ವರ್ಷದಲ್ಲಿ 10 ಸಾವಿರ ರೂ. ಗಳನ್ನು ಕೊಟ್ಟರು. ಇನ್ನೊಂದು ವರ್ಷ 10 ಸಾವಿರ ರೂ. ಗಳನ್ನು ಕೊಟ್ಟರು ನಾವು ಅಲ್ಲಿ ಶಾಸಕರಾಗಿದ್ದವರು ನಾವೇನು ಮಾಡಬೇಕು? ಜನರು ಬಂದು ನಮ್ಮ ಹತ್ತಿರ ಸ್ವಾಮಿ ಅಲ್ಲಿ ಫೌಂಡೇಶನ್ ಮಾಡಿದ್ದೇವೆ, ಗೋಡೆಗಳಿಗೆ ಹಣವಿಲ್ಲ. ಗೋಡೆ ಕಟ್ಟಿದ್ದೇವೆ, ಮಾಡು ಮಾಡುವುದಕ್ಕೆ ಹಣವಿಲ್ಲ, ಕೊಡುವುದು 30 ಸಾವಿರ ರೂ. ಆ ಹಣದಲ್ಲಿ ಶಾಸಕರ ಮನೆಯ ದ್ವಾರ ಮಾಡುವುದಕ್ಕಾಗುವುದಿಲ್ಲ. ಅದು ಆಶ್ರಯ ಮನೆ ಇರಬಹುದು, ಅಥವಾ ಮತ್ಸಾಶ್ರಯ ಯೋಜನೆಯ ಮನೆ ಇರಬಹುದು, ಇಂದಿರಾ ಅವಾಸ್ ಮನೆ ಇರಬಹುದು, ಐಟಿಬಿ ಮನೆಗಳು ಇರಬಹುದು. ಕೊಡುವುದನ್ನಾದರೂ ಸರಿಯಾಗಿ ಕೊಡಿ, ಹಣವಿಲ್ಲದಿದ್ದರೆ ಈ ಯೋಜನೆಗಳನ್ನೂ ಸರ್ಕಾರ ಮಾಡಬಾರದು. ಕೊಡುವುದಿದ್ದರೆ ಸಕಾಲದಲ್ಲಿ ಕೊಡಿ, ಇಲ್ಲದಿದ್ದರೆ ಈ ಯೋಜನೆ ಇಲ್ಲವೆಂದು ಹೇಳಿ, ರಾಷ್ಟ್ರೀಯ ಕುಟುಂಬ ಯೋಜನೆ ಇರಬಹುದು, ಏತಕ್ಕಾಗಿ ಈ ರೀತಿ ಮಾಡುತ್ತಾರೋ ಗೊತ್ತಿಲ್ಲ. ಜನ ಹಣ ಸಿಗುತ್ತದೆಂದು ತಿರುಗಿ ತಿರುಗಿ ಪಾಪ ಬಸ್ ಚಾರ್ಜ್ ಹಣ ಕಳೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು : ಆಯಿತು ಬಿಡಿ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಇದು ನನ್ನ ವೈಯಕ್ತಿಕ ಪ್ರಶ್ನೆ ಅಲ್ಲ, ಇದು ಸಾರ್ವಜನಿಕರ ಹಿತಾಸಕ್ತಿಯ ಪ್ರಶ್ನೆಯಾಗಿದೆ. ಇದರ ಬಗ್ಗೆ ನಾನು ಪರ್ಟಿಕ್ಯುಲರ್ ಆಗಿ ಅಂಕಿಅಂಶಗಳನ್ನು ಕೇಳಿಲ್ಲ. ನಾನು ಅದನ್ನು ಕೇಳಿದ್ದರೆ ಉತ್ತರವನ್ನು ಕೊಡುವುದಕ್ಕೆ ಸಚಿವರಿಗೆ ಕಷ್ಟವಾಗುತ್ತಿತ್ತು. ಹಾಗೆಯೇ ಮೀನುಗಾರರಿಗೆ ಸಂಬಂಧಪಟ್ಟಂತಹ ರಸ್ತೆಗಳು ಇವೆ. ಒಂದು ಕಡೆ ಸ್ಟೇಟ್ ಹೈವೇ ಎಂದು ಹೇಳುತ್ತಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಡಿಮ್ಯಾಂಡ್ ಮೇಲೆ ಅದರ ಬಗ್ಗೆ ಮಾತನಾಡಿ. ನೀವು ಕಥೆಯನ್ನು ಹೇಳುತ್ತಿದ್ದೀರಿ. ಪ್ರಶ್ನೋತ್ತರದಲ್ಲಿ ಹೀಗೆ ಮಾಡಿದರೆ ಹೇಗೆ

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ತಮಗೆ ಸರ್ಕಾರಕ್ಕೆ ಮಾರ್ಗದರ್ಶನವನ್ನು ಕೊಡುವಷ್ಟು ಯೋಗ್ಯತೆ ಉಂಟು. ನಮಗೆ ಅವಕಾಶ ಸಿಗುವುದು ಬಹಳ ಕಡಿಮೆ. ಎದುರಿನ ಸಾಲಿನವರಿಗೆ ತಾವು ಹೇಳುತ್ತೀರಿ ಗೊತ್ತಿಲ್ಲ. ಹಿಂದಿನ ಸಾಲಿನವರು ಗೆದ್ದವರಲ್ಲವೇ ಅಥವಾ ಆಯ್ಕೆಯಾಗಿದ್ದೇವೆ, ನಾವು ಏನು ಲಿಸ್ಟ್ ಮಾಡಿಕೊಡಬೇಕೋ ಏನೋ ನಮಗೆ ಗೊತ್ತಿಲ್ಲ. ಹಾಗೆ ಮೀನುಗಾರಕೆ ರಸ್ತೆಗಳು ಇವೆ. ಒಂದು ಕಡೆ ಈ ರಾಜ್ಯದಲ್ಲಿ ಸ್ಟೇಟ್ ಹೈವೇ ಎಂದು ಹೇಳುತ್ತಾರೆ, ಅದೇ ರಸ್ತೆಯಲ್ಲಿ ಹೋಗುವಾಗ, ಜಿಲ್ಲಾ ಪಂಚಾಯತ್ ರಸ್ತೆ ಎಂದು ಹೇಳುತ್ತಾರೆ, ಅದೇ ರಸ್ತೆಯಲ್ಲಿ ಮುಂದೆ ಹೋಗುವಾಗ ಮೀನುಗಾರಿಕೆ ರಸ್ತೆ ಎಂದು ಹೇಳುತ್ತಾರೆ. ಇನ್ನು ಗೊತ್ತಿಲ್ಲ, ಹೈನುಗಾರಿಕೆ ರಸ್ತೆ,, ಮೀನುಗಾರಿಗೆ ರಸ್ತೆ, ತೋಟಗಾರಿಗೆ ರಸ್ತೆ, ಈ ರಾಜ್ಯದ ಎಲ್ಲಾ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ರಸ್ತೆಗಳೆಂದು ಒಂದೇ ರಸ್ತೆಯನ್ನಾಗಿ ಮಾಡುವುದು ಒಳ್ಳೆಯದು. ಇಲ್ಲಿಗೆ ಹಣವೇ ಬರುವುದಿಲ್ಲ. ಮೀನುಗಾರಿಕೆ ರಸ್ತೆಗಳ ಬಗ್ಗೆ ಕೆಲವರು ಹೇಳುತ್ತಾರೆ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸ ಶೆಟ್ಟರೆ, ಏನು ಈ ತರಹ ಇಷ್ಟು ಉಪಪ್ರಶ್ನೆಯನ್ನು ಕೇಳಿದರೆ ಹೇಗೆ? ಇದು ಬೇರೆಯವರ ಪ್ರಶ್ನೆ ನೀವು ಉಪಪ್ರಶ್ನೆಯನ್ನು ಕೇಳುವಾಗ 10 ನಿಮಿಷಗಳ ಕಾಲ ನಿಂತುಕೊಂಡು ಕೇಳಿದರೆ ಇದೇನು ಪ್ರಶ್ನೆ ಅನ್ನಿಸಿಕೊಳ್ಳುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಭಾಕರ ಬಂಗೇರಾರವರು ಇದಕ್ಕೆ ಎಷ್ಟು ಕಾಸ್ಟ್ ಆಗುತ್ತದೆಂದು ಕೇಳಿದ್ದಾರೆ. ಇದಕ್ಕೆ 30 ಸಾವಿರ ರೂಪಾಯಿಗಳಾಗುತ್ತದೆ. ಮಾನ್ಯ ಶ್ರೀನಿವಾಸ ಶೆಟ್ಟಿಯವರು ಹೇಳಿರುವುದು ಕರೆಕ್ಟಾಗಿದೆ. ಏನೆಂದರೆ ಅವರ ಕಂಡಿಷನ್ ಅವರಿಗೆ ಒಂದು ಸೈಟ್ ಇರಬೇಕೆಂದು ಹೇಳಿದ್ದಾರೆ. ಎಕೆ ನಂಬರ್ ಆಫ್ ಬೆನಿಫಿಷರೀಸ್ ಉಡುಪಿಗೆ ಜಾಸ್ತಿ ಕೊಟ್ಟಿದ್ದಾರೆಂದು ಕೇಳಿದ್ದಾರೆ. ಉಡುಪಿಯಲ್ಲಿ ಹೆಚ್ಚಿಗೆ ಜನ ಮೀನುಗಾರರಿ ದ್ದಾರೆನ್ನುವಂತಹ ಕಾರಣದಿಂದಾಗಿ ಕೊಟ್ಟಿದ್ದಾರೆ. ಇದು ಮೊದಲನೆಯದು. ತಾವು ಏನು ಹೇಳಿದ್ದೀರಿ, ಇದೊಂದು ಒಳ್ಳೆಯ ಸಲಹೆಯಾಗಿದೆ. ಇದು ಹಿಂದೆ ಆಗಿರುವಂತಹದ್ದು 200506ನೇ ಸಾಲಿನಲ್ಲಿ ಸಮ್ಮಿಶ್ರ ಸರ್ಕಾರದಲ್ಲಿ ನಾವು 5000 ಮನೆಗಳನ್ನು ಕೊಡಬೇಕೆಂದು ಇದ್ದೇವೆ. ಅದನ್ನು ಕಾಲಕಾಲಕ್ಕೆ ತಕ್ಕಂತೆ ತಾವು ಏನು ಹೇಳುತ್ತಿದ್ದೀರಿ, 6 ತಿಂಗಳಿಗೆ ಒಂದು ಸಾರಿ ಕೊಡಬೇಕೆಂದು ಹೇಳಿದ್ದೀರಿ, ನಾನು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ. ಅಲ್ಲೆ ಕರೆಕ್ಟಾಗಿ ಹಣ ರಿಲೀಸ್ ಆಗುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನು ಮಾನ್ಯ ಶ್ರೀನಿವಾಸ ಶೆಟ್ಟಿಗವರು ಎತ್ತಿದ್ದಾರೆ, ಅವರು ಸರ್ಕಾರವನ್ನು ಅಭಿನಂದಿಸಬೇಕು, ಈಗ ಸುನಾಮಿ ಫಂಡ್‌ನಿಂದ 2 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಮೀನುಗಾರಿಕಾ ರಸ್ತೆಗಳನ್ನು ರಿಪೇರಿ ಮಾಡುವ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೋದ ತಿಂಗಳು ಸ್ಯಾಂಕ್ಷನ್ ಮಾಡಿದ್ದಾರೆ. ಈಗ ನಾವು ಮಳೆ ನಿಲ್ಲಲಿ ಎಂದು ಕಾಯುತ್ತಿದ್ದೇವೆ. ನಾವು ಆಗಲೇ ರೋಡ್‌ಗಳನ್ನು ಐಡೆಂಟಿಫೈ ಮಾಡಿದ್ದೇವೆ. ಬಹುಶಃ ಈ ಮಳೆ ನಿಂತ ತಕ್ಷಣವೇ ಎಲ್ಲಾ ರಸ್ತೆಗಳನ್ನು ರಿಪೇರಿ ಮಾಡಿಸುವ ಬಗ್ಗೆ ದುರಸ್ತಿ ಮಾಡುವ ಬಗ್ಗೆ ಹಾಗೂ ಡಾಂಬರೀಕರಣ ಮಾಡುವ ಬಗ್ಗೆ 2 ಕೋಟಿ ರೂಪಾಯಿಗಳನ್ನು ಉಡುಪಿ ಜಿಲ್ಲೆಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮೀನುಗಾರಿಕೆ ರಸ್ತೆಯ ಬಗ್ಗೆ ಹಣ ಬಿಡುಗಡೆಯಾಗಿದೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಸಚಿವರ ಕೇಳಬೇಕು, ಸುನಾಮಿ ಫಂಡ್ ಎಂದು ಕೊಟ್ಟುರುವುದು ರಸ್ತೆಗಳಿಗಲ್ಲ, ಅಂತಹ ಸುನಾಮಿಯಂತಹ ಅಪಘಾತಗಳು ಆದಾಗ ರಕ್ಷಣೆಯನ್ನು ಹೇಗೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಹೊರತು ಅದನ್ನು ರಸ್ತೆ ರಿಪೇರಿಗಳಿಗೆ ಕೊಡುತ್ತಿಲ್ಲ. ಮಾನ್ಯ ಸಚಿವರು ಅದರ ಬಗ್ಗೆ ಸರಿಯಾಗಿ ತಿಳಿದುಕೊಳ್ಳಬೇಕಾಗಿತ್ತು.

ಶ್ರೀ ಡಿ. ಟಿ. ಜಯಕುಮಾರ್ : ರಸ್ತೆ ರಿಪೇರಿಯ ಬಗ್ಗೆ ಹಾಗೂ ಕಡಲ ಕೊರೆತಕ್ಕೆ 2 ಕೋಟಿ ರೂಪಾಯಿಗಳು ಸ್ಯಾಂಕ್ಷನ್ ಆಗಿದೆ.

(ಗೊಂದಲ)

ಶ್ರೀ ಎನ್.ಯೋಗೀಶ್‌ಭಟ್ : ಹಾಗಾದರೆ ಮಾನ್ಯ ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಕರಾವಳಿ ಭಾಗದಲ್ಲಿ ಸೇತುವೆಗಳು ಅಗತ್ಯ.

ಶ್ರೀ ಎನ್.ಯೋಗೀಶ್‌ಭಟ್ : ಅಲ್ಲಿ ಕೊಟ್ಟಿರುವಂತಹ ಹಣ ಕಡಲ ಕೊರೆತಕ್ಕೆ ಸಂಬಂಧಪಟ್ಟಿರತಕ್ಕ ಹಣವಾಗಿದೆ. ಅದು ರಸ್ತೆ ರಿಪೇರಿಗೆ ಕೊಟ್ಟ ಹಣವಲ್ಲ. ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡಬಾರದು. ಎರಡನೆಯ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರದಲ್ಲಿ 10½ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟಿದ್ದರು. ಈ ಸರ್ಕಾರದಲ್ಲಿ ನಮಗೆ ಕಳೆದ ವರ್ಷ ಹಣ ಬಿಡುಗಡೆಯಾಗಿರಲಿಲ್ಲ. 10 ಕೋಟಿ ರೂಪಾಯಿಗಳನ್ನು ತಾವು ವಿತ್‌ಡ್ರಾ ಮಾಡಿದ್ದೀರಿ, ಈ ವರ್ಷ ಮಾತ್ರ ಸುನಾಮಿ ಹೆಸರಿನಲ್ಲಿ ಸುಮಾರು 3 ಕೋಟಿ ರೂಪಾಯಿಗಳನ್ನು ನಮಗೆ ಕೊಟ್ಟಿದ್ದೀರಿ. ನಿಜವಾಗಿಯೂ ಕರಾವಳಿ ಕಡಲಕೊರೆತಕ್ಕೆ ತಾವು ಅನ್ಯಾಯ ಮಾಡುತ್ತಿದ್ದೀರಿ.

ಶ್ರೀ ಡಿ.ಟಿ. ಜಯಕುಮಾರ್ : ಕಡಲಕೊರೆತ ಮತ್ತು ಸಮುದ್ರ ತೀರದಲ್ಲಿರತಕ್ಕಂತಹ ರಸ್ತೆಗಳಿಗೆ ಕೊಡಲಾಗಿದೆ.

ಅಧ್ಯಕ್ಷರು : ಆಯಿತು, ದಯಮಾಡಿ ತಾವು ಕುಳಿತುಕೊಳ್ಳಿ. ಮಾನ್ಯ ಆರ್. ಕೆ. ರಾಥೋಡ್‌ರವರು ತಮ್ಮ ಪ್ರಶ್ನೆ ಕೇಳಿ.